ಸೆಲೆಬ್ರಿಟಿ
■ ಹನಿ

# ಏಟು ತಿಂದ ಮಲ್ಲಿಕಾ

ಮಲ್ಲಿಕಾ ಶೆರಾವತ್ ಹೆಸರನ್ನು ಎಲ್ಲರೂ ಮರೆತೇ ಬಿಟ್ಟರು ಎನ್ನುವಾಗ ದೂರದ ಪ್ಯಾರಿಸ್‌ನಲ್ಲಿ ದರೋಡೆಕೋರರು ನೆನಪಿಗೆ ತಂದುಕೊಂಡಿದ್ದಾರೆ. ತನ್ನ ಬಾಯ್‌ಫ್ರೆಂಡ್ ಸಿರಿಲ್ ಆಕ್ಸೆನ್‌ಫ್ಯಾನ್ಸ್ ಜತೆಗೆ ತಿರುಗಾಟ ನಡೆಸಿ ಮನೆಯ ಮೆಟ್ಟಿಲು ಹತ್ತುತ್ತಿದ್ದ ಮಲ್ಲಿಕಾ ಮೇಲೆ ದರೋಡೆಕೋರರು ಅಶ್ರುವಾಯು ಸ್ಪ್ರೇ ಮಾಡಿ ಹಲ್ಲೆ ನಡೆಸಿದ್ದಾರೆ. ಇಬ್ಬರಿಗೂ ಗೂಸಾ ಕೊಟ್ಟ ಮೇಲೆ ದರೋಡೆಕೋರರು ಕಣ್ಮರೆಯಾಗಿದ್ದಾರೆ. ದರೋಡೆಕೋರರು ಏನನ್ನೂ ಕಿತ್ತುಕೊಳ್ಳದೆ ಬರೇ ಗೂಸಾ ಕೊಟ್ಟು ಓಡಿಹೋದದ್ದೇಕೆ ಎನ್ನುವುದೀಗ ಅಲ್ಲಿನ ಪೊಲೀಸರ ತಲೆ ತಿನ್ನುತ್ತಿರುವ ಪ್ರಶ್ನೆ. ತಿಂಗಳ ಹಿಂದೆ ಅದೇ ಪ್ಯಾರಿಸ್‌ನಲ್ಲಿ ಸೂಪರ್ ಮಾಡೆಲ್ ಕಿಮ್ ಕರ್ದಶಿಯಾನ್ ಮೇಲೆಯೂ ಹೀಗೆ ಹಲ್ಲೆ ನಡೆದು ಒಡವೆಗಳನ್ನು ದೋಚಿದ್ದು ದೊಡ್ಡ ಸುದ್ದಿಯಾಗಿತ್ತು. ಈಗ ಮಲ್ಲಿಕಾ ಸರದಿ.

ಒಂದು ಕಾಲದಲ್ಲಿ ಬಾಲಿವುಡ್‌ನಲ್ಲಿ ಮಲ್ಲಿಕಾ, ಸುದ್ದಿ ಮಾಧ್ಯಮಗಳ ಡಾರ್ಲಿಂಗ್ ಆಗಿದ್ದುದು ಸುಳ್ಳಲ್ಲ. ಮಲ್ಲಿಕಾಳ ಸಿನಿಮಾ ಓಡಿದ್ದಕ್ಕಿಂತ ಹೆಚ್ಚಾಗಿ ಆಕೆಯ ಕುರಿತ ಬಿಸಿ ಬಿಸಿ ಸುದ್ದಿಗಳೇ ಹೆಚ್ಚು ಪ್ರಚಾರ ಪಡೆದದ್ದೂ ನಿಜ. ಆದರೆ ಮಲ್ಲಿಕಾಳ ಬೆನ್ನಲ್ಲೇ ರಾಖಿ ಸಾವಂತ್ ಮುಂತಾದ ನಟಿಯರು ಇನ್ನಷ್ಟು ಎಕ್ಸ್‌ಪೋಸಿಂಗ್ ದೃಶ್ಯಗಳಲ್ಲಿ ನಟಿಸಲು ತೊಡಗಿದ ಬಳಿಕ ಬಾಲಿವುಡ್‌ನಲ್ಲಿ ಮಲ್ಲಿಕಾ ಕ್ರೇಝ್ ಕಡಿಮೆಯಾಯಿತು.

2003ರಲ್ಲಿ ಬಂದ ಹಿಂದಿ ಚಿತ್ರ 'ಖ್ವಾಯಿಷ್' ಮೂಲಕ ಮಲ್ಲಿಕಾ ಎಲ್ಲರ ಮೂಗಿಗೆ ಬೆರಳೇರುವಂತೆ ಮಾಡಿದ್ದಳು. ಆ ಬಳಿಕ 'ಮರ್ಡರ್' ಬಂತು. ನಟನೆಯ ಕುರಿತು ಹೇಳಿಕೊಳ್ಳುವಂತಹದ್ದು ಏನಿಲ್ಲವಾದರೂ ಮಾದಕ ದೃಶ್ಯಗಳ ಮೂಲಕ ಗಮನ ಸೆಳೆದ ಮಲ್ಲಿಕಾ 'ಪ್ಯಾರ್ ಕಾ ಸೈಡ್ ಎಫೆಕ್ಟ್' ಹಾಸ್ಯ ಚಿತ್ರದಲ್ಲಿ ಮನಗೆದ್ದಳು. ಹಾಗೆ ನೋಡಿದರೆ 2011ರಲ್ಲಿ ತೆರೆಗೆ ಬಂದ 'ಡಬಲ್ ಧಮಾಲ್' ಮಾತ್ರ ಮಲ್ಲಿಕಾ ನಟಿಸಿದ ಚಿತ್ರಗಳ ಪೈಕಿ ಬಾಕ್ಸಾಫೀಸ್‌ನಲ್ಲಿ ಸೂಪರ್ ಹಿಟ್ ಆದ ಚಿತ್ರ.

ಸುದ್ದಿ ಮಾಡುವಲ್ಲಿ ಮಾತ್ರ ಮಲ್ಲಿಕಾ ಯಾವತ್ತೂ ಹಿಂದೆ ಬೀಳಲಿಲ್ಲ. ಕಳೆದ ವರ್ಷ ಕೇನ್ಸ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಮಲ್ಲಿಕಾ ನಟಿಸಿದ 'ಟೈಮ್ ರೈಡರ್ಸ್' ಪ್ರದರ್ಶನ ಕಂಡಿದ್ದು, ಐಶ್ವರ್ಯ ರೈ ಜತೆಗೆ ಆಕೆಯೂ ವೇದಿಕೆಯ ಮೇಲೇರಿ ಮಿಂಚಿದ್ದಳು. ಜಾಕಿ ಚಾನ್ ಜತೆ 'ಮಿಥ್' ಚಿತ್ರದಲ್ಲಿ ನಟಿಸಿದ್ದೂ ದೊಡ್ಡ ಸುದ್ದಿಯಾಯಿತು. ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾರನ್ನು ಎರಡೆರಡು ಬಾರಿ ಭೇಟಿಯಾದ ಮಲ್ಲಿಕಾ, 'ಹೀಗೆ ಭೇಟಿಯಾದ ಏಕೈಕ ಬಾಲಿವುಡ್ ನಟಿ ನಾನು' ಎಂದು ಹೇಳಿಕೊಂಡು ತಿರುಗಾಡಿದ್ದೂ ಆಯಿತು! ಈಗ ಪ್ಯಾರಿಸ್‌ನಲ್ಲಿ ನಡೆದ ಹಲ್ಲೆಯಿಂದಾಗಿ ಈಕೆಯೂ ಕಿಮ್ ಕರ್ದಶಿಯಾನ್ ಮಟ್ಟದ ಅಂತರರಾಷ್ಟ್ರೀಯ ಖ್ಯಾತಿ ಪಡೆದಂತಾಗಿದೆ.

ಹರಿಯಾಣದಲ್ಲಿ ಹುಟ್ಟಿ ಬೆಳೆದ ಮಲ್ಲಿಕಾ ಬಾಲಿವುಡ್‌ಗೆ ಪ್ರವೇಶ ಪಡೆದದ್ದು 'ಜೀನಾ ಸಿರ್ಫ್ ಮೇರೆ ಲಿಯೆ' ಎಂಬ ಸಿನಿಮಾದ ಸಣ್ಣ ಪಾತ್ರದಲ್ಲಿ. ಆ ಚಿತ್ರದಲ್ಲಿ ಈಕೆಯ ಹೆಸರು ಇದ್ದುದು ರೀಮಾ ಲಂಬಾ ಎಂದು! ಅದಕ್ಕೂ ಮುನ್ನ ಅಮಿತಾಭ್ ಬಚ್ಚನ್ ಜತೆ ಬಿಪಿಎಲ್ ಕಂಪೆನಿಯ ಮತ್ತು ಶಾರೂಕ್ ಖಾನ್ ಜತೆಗೆ ಸ್ಯಾಂಟ್ರೊ ಕಾರಿನ ಜಾಹೀರಾತುಗಳಲ್ಲೂ ಈಕೆ ಕಾಣಿಸಿಕೊಂಡಿದ್ದಳು! ಮೊದಲ ಸಿನಿಮಾದ ಬಳಿಕ ಕ್ಯಾಪ್ಟನ್ ಕರಣ್‌ಸಿಂಗ್ ಗಿಲ್ ಜತೆಗೆ ಮದುವೆಯಾಯಿತು. ಆದರೆ ಮದುವೆ ಹೆಚ್ಚು ಕಾಲ ಬಾಳಿಕೆ ಬರಲಿಲ್ಲ. ಬಾಲಿವುಡ್ ಸೆಳೆತಕ್ಕೆ ಸಿಕ್ಕಿದ ಮಲ್ಲಿಕಾ ಮುಂಬೈವಾಸಿಯಾದಳು. ವಿಮಾನ ಕಂಪೆನಿಯೊಂದರಲ್ಲಿ ಗಗನಸಖಿಯಾದಳು. ಮ್ಯೂಸಿಕ್ ವೀಡಿಯೋಗಳಲ್ಲಿ ಕುಣಿದಳು.

ನಿಜಜೀವನದ ಮದುವೆಯಲ್ಲದೆ ಟೀವಿ ರಿಯಾಲಿಟಿ ಶೋನಲ್ಲೂ ಮಲ್ಲಿಕಾ ಶೆರಾವತ್‌ಗೆ ಮದುವೆಯ ಬಂಧ ಕೂಡಿ ಬಂದಿತ್ತು. 'ಮೇರೆ ಖಯಾಲೋಂಕಿ ಮಲಿಕಾ' ಎಂಬ ರಿಯಾಲಿಟಿ ಶೋನಲ್ಲಿ ಹತ್ತಾರು ಗಂಡುಗಳನ್ನು ತಿರಸ್ಕರಿಸಿ ಕೊನೆಗೆ ವಿಜಯ್‌ಸಿಂಗ್ ಎಂಬ ಉದ್ಯಮಿಯನ್ನು ಮದುವೆಯಾಗಲು ಮಲ್ಲಿಕಾ ಆಯ್ಕೆ ಮಾಡಿಕೊಂಡಿದ್ದಳು. ಆ ರಿಯಾಲಿಟಿ ಶೋ ನಿಯಮಗಳ ಪ್ರಕಾರ, ಹೀಗೆ ಆಯ್ಕೆಯಾದವರು ಒಂದು ವರ್ಷದ ಒಳಗೆ ಮದುವೆ ಆಗಬೇಕು. ಅದಾಗದಿದ್ದರೆ ಒಪ್ಪಂದ ರದ್ದಾಗುತ್ತದೆ. ಮದುವೆಗೆ ವಿಜಯ್‌ಸಿಂಗ್ ಸಿದ್ಧನಿದ್ದರೂ ಮಲ್ಲಿಕಾ ಮನೆಯವರು ಒಪ್ಪಲಿಲ್ಲವಂತೆ. ಅದಕ್ಕೆ ಮಲ್ಲಿಕಾ ಕೊಟ್ಟ ಕಾರಣವೆಂದರೆ, ಅವನಿನ್ನೂ ಚಿಕ್ಕವನು!

ಈಗ 40ರ ಹರೆಯದ ಮಲ್ಲಿಕಾ (ಬರ್ತ್‌ಡೇ 24.10.1976) ಗೆ ಟ್ವಿಟ್ಟರ್‌ನಲ್ಲಿ 20 ಲಕ್ಷ ಹಿಂಬಾಲಕರಿದ್ದಾರಂತೆ! ಕಳೆದ ಮಾರ್ಚ್ ತಿಂಗಳಲ್ಲೊಮ್ಮೆ ಈಕೆ 'ಪ್ರೀತಿಯಲ್ಲಿ ಬೀಳುವುದು ಜಗತ್ತಿನಲ್ಲೇ ಅತ್ಯುತ್ತಮ ಭಾವನೆ' ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಬರೆದುಕೊಂಡಳು. ಅದೇ ವೇಳೆಗೆ ಪ್ಯಾರಿಸ್‌ನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಸಿರಿಲ್ ಜತೆಗೆ ಈಕೆಯ ಓಡಾಟದ ಸುದ್ದಿ ಬಂತು. ಕೆಲವು ದಿನಗಳ ಬಳಿಕ 'ಮಗಳು ಸಿರಿಲ್‌ನನ್ನು ಮದುವೆಯಾಗಿದ್ದಾಳೆ. ಶೀಘ್ರವೇ ಭಾರತಕ್ಕೆ ಬರುತ್ತಾಳೆ' ಎಂದು ಇವಳಪ್ಪ ಸುದ್ದಿಗಾರರಿಗೆ ತಿಳಿಸಿದ. ಮರುವಾರವೇ ಮಲ್ಲಿಕಾಳ ಟ್ವೀಟ್ ಬಂತು– 'ದಯವಿಟ್ಟು ಯಾರೂ ಗಾಳಿಸುದ್ದಿಗಳಿಗೆ ಗಮನ ಕೊಡಬೇಡಿ. ನನ್ನ ಮದುವೆ ಆಗಿಲ್ಲ. ಮದುವೆ ಆಗುವಾಗ ನಿಮ್ಮನ್ನೆಲ್ಲ ಖಂಡಿತಾ ಕರೆಯುತ್ತೇನೆ!' ಮಲ್ಲಿಕಾಳಿಗೆ ಮದುವೆಯಾಗಲಿ ಎಂದು ಅವಳ ಅಭಿಮಾನಿಗಳಲ್ಲಿ ಯಾರೂ ಬಯಸುತ್ತಿಲ್ಲ! ಆದರೆ ಹೀಗೆ ದರೋಡೆಕೋರರು ಹಲ್ಲೆ ನಡೆಸುವಂತಾಗದಿರಲಿ! ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65